ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬೆಂಗಳೂರಿನ ಮಹಾನಗರ ಪಾಲಿಕೆಯಲ್ಲಿ ಉಪ-ಆರೋಗ್ಯಾಧಿಕಾರಿಗಳ ಹುದ್ದೆಗಳ ಭರ್ತಿಯ ಬಗ್ಗೆ

೧೫೨೬. ಶ್ರೀ ಆರ್. ರೋಷನ್‌ಬೇಗ್ (ಶಿವಾಜಿನಗರ) —ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿರುವ ಮುಖ್ಯ ಅಭಿಯಂತರರು, ನಗರ ಯೋಜನೆ ಉಪ-ನಿರ್ದೇಶಕರು, ಎರಡು ಕಾರ್ಯಕಾರಿ ಅಭಿಯಂತರರು, ಎರಡು ಉಪ-ಆರೋಗ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದು ನಿಜವೇ ?

ಆ) ಹಾಗಿದ್ದಲ್ಲಿ, ಆ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಈಗಲಾದರು ಕ್ರಮ ತೆಗೆದು ಕೊಳ್ಳುವುದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು).—

ಅ) ಉಪ-ಆರೋಗ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇಲ್ಲ. ಇತರೇ ಹುದ್ದೆಗಳು ಸದ್ಯಕ್ಕೆ ಖಾಲಿ ಇವೆ. ಮುಖ್ಯ ಅಭಿಯಂತರ ಹುದ್ದೆಯನ್ನು ಇತ್ತೀಚೆಗೆ ತುಂಬಲಾಗಿದೆ.

ಆ) ಮುಖ್ಯ ಅಭಿಯಂತರ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರವು ನೇರ ನೇಮಕಾತಿ ಪ್ರಾಧಿಕಾರ ಆಗಿದೆ. ದಿನಾಂಕ ೨೧-೨-೧೯೮೬ ರಂದು ಒಬ್ಬ ಅಧಿಕಾರಿಯನ್ನು ಮುಖ್ಯ ಅಭಿಯಂತರನ್ನಾಗಿ ನೇಮಿಸಲಾಗಿದೆ. ಇತರೇ ಖಾಲಿ ಹುದ್ದೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಭರ್ತಿ ಮಾಡಬೇಕಾಗಿದೆ. ಎಷ್ಟು ತ್ವರಿತವಾಗಿ ಭರ್ತಿಮಾಡಲು ಸಾಧ್ಯವೋ ಅಷ್ಟು ತ್ವರಿತವಾಗಿ ಭರ್ತಿಮಾಡುವಂತೆ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಿಗೆ ಸೂಚಿಸಲಾಗುವುದು.

ಹೊಸಕೋಟೆ ಮತ್ತು ಮಾಲೂರು ಮಧ್ಯ ಓಡಾಡುತ್ತಿರುವ ಖಾಸಗಿ ಬಸ್ಸುಗಳ ಬಗ್ಗೆ

೧೬೧೧. ಶ್ರೀ ಹೆಚ್. ಬಿ. ದ್ಯಾವರಪ್ಪ.—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಹೊಸಕೋಟೆ ಮತ್ತು ಮಾಲೂರು ಮಧ್ಯ ಓಡಾಡುತ್ತಿರುವ ಖಾಸಗಿ ಬಸ್ಸುಗಳ ಸಂಖ್ಯೆ ಎಷ್ಟು ? ಹಾಗೂ ಈ ಎಲ್ಲಾ ಬಸ್ಸುಗಳು ಸದರಿ ರಸ್ತೆಯಲ್ಲಿ ಓಡಾಡಲು ಪಾಲ್ತಿಯಲ್ಲಿರುವ ಪರವಾನಿಗೆಗಳನ್ನು ಹೊಂದಿವೆಯೇ ?

ಆ) ಒಳಪ್ರದೇಶಗಳಿಗೆ ಓಡಾಡಲು ಪರವಾನಿಗೆ ಕೊಟ್ಟಿದ್ದರೂ ಸಹ ಹೆದ್ದಾರಿಗಳಲ್ಲಿ ಈ ಬಸ್‌ಗಳು ಓಡಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಇದರಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ನಷ್ಟ ಉಂಟಾಗುವುದಿಲ್ಲವೆ ?

ಇ) ಹೌದಾದಲ್ಲಿ, ಈ ಅಕ್ರಮ ಸಂಚಾರವನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮವೇನು ?

ಈ) ಕೋಲಾರ ಜಿಲ್ಲೆಯಲ್ಲಿನ ರಸ್ತೆಗಳನ್ನು ರಾಷ್ಟ್ರೀಕರಣಗೊಳಿಸಲು ಸರ್ಕಾರ ಪರಿಶೀಲಿಸುತ್ತಿದೆಯೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು).—

ಅ) ೧. ೨೮
೨. ಹೌದು

ಆ) ಹೌದು